
ಒಬ್ಬರನ್ನೊಬ್ಬರು ಅಗಲಿ ಇರುವ ಶಕ್ತಿಯೂ ಇಲ್ಲ. ತನ್ನ ಕಾಯಿಲೆಯ ಕಾರಣಕ್ಕೆ ಹೆಂಡತಿಯಿಂದ ಹಾಸಿಗೆಯಲ್ಲಿ ದೂರ ಇರಬೇಕಾದ ಸಂಕಟವನ್ನು ನೀಗಿಕೊಳ್ಳಲು ಅವಳೆಷ್ಟ ಒದ್ದಾಡುತ್ತಲೇ ಇರುತ್ತಾನೆ. ಅವರ ಬದುಕಿನ ವಿವರಗಳ ಜೊತೆಗೆ ಗಾಢವಾಗಿ ಬೆಳೆಯುತ್ತ ಹೋಗುವ ಕಥೆ, ಕೊನೆಯಲ್ಲಿ ಅಚಾನಕ್ಕಾಗಿ ಮುಗಿದುಬಿಡುತ್ತದೆ.

ನವ್ಯಕಥನ ಶೈಲಿಯ ಪ್ರಭಾವ ಎದ್ದು ಕಾಣುವ 'ಕಗ್ಗಂಟು' ಕಥೆಯೂ ಸಾವಿತ್ರಿಯ ಬದುಕಿನ ವಿವರಗಳು ಮತ್ತದರ ಸರಿ ತಪ್ಪುಗಳ ಲೆಕ್ಕಾಚಾರಗಳನ್ನು ಮೀರಿ ಕಥೆ ಬೆಳೆಯುವುದೇ ಇಲ್ಲ.

'ಎರಡನೆಯ ಸೊಸೆ' ಕಥೆಯ ವಸ್ತು ತುಂಬ ಸಂಕೀರ್ಣವಾಗಿದೆ. ಆದರೆ ಆ ಸಂಕೀರ್ಣತೆಯನ್ನು ಕಥೆ ಧ್ವನಿಪೂರ್ಣವಾಗಿ ಕಟ್ಟಿಕೊಡಲು ವಿಫಲವಾಗುತ್ತದೆ. ಇಬ್ಬರು ಸೊಸೆಯಂದಿರ ಚಿತ್ರಣ ತುಂಬ ಗಟ್ಟಿಯಾಗಿ ಮೂಡಿಬಂದಿದೆ. ಆದರೆ ಅದೇ ಹೊತ್ತಿನಲ್ಲಿ ಉಳಿದ ಪಾತ್ರಗಳು ನಮ್ಮ ಕಣ್ಣೆದುರು ಬರುವುದೇ ಇಲ್ಲ. ತನ್ನ ವರದಿಗಾರಿಕೆಯ ಗುಣದಿಂದಾಗಿಯೇ ಈ ಕಥೆ ಬಡವಾಗಿದೆ.

ಗಂಡಿನ ರೂಪ ಹೊತ್ತು ಹೆಣ್ಣಿನ ಭಾವಗಳನ್ನು ಇಟ್ಟುಕೊಂಡು ಹುಟ್ಟಿದವನ ಬದುಕನ್ನು ಸಮಾಜ ಹೇಗೆ ಹುರಿದು ಮುಕ್ಕುತ್ತದೆ ಎನ್ನುವುದನ್ನು ಕಟ್ಟಿಕೊಡುವ ಕಥೆ 'ಹೆಣ್ಣಕ್ಕಿ'. ಕಬ್ಬನ್ನು ಕದ್ದ ಹುಡುಗರಿಗೆ ಮಲವನ್ನು ತಿನ್ನಿಸುವ ಅಮಾನವೀಯ ಘಟನೆಯೊಂದಿಗೆ ತೆರೆದುಕೊಳ್ಳುವ ಕಥೆ 'ಖುಲಾಸೆ'. ಈ ಕಥೆಯ ಕೇಂದ್ರ ಬಹುಬೇಗನೇ, ಜೈಲಿನಲ್ಲಿರುವ ಶಿವಶಂಕರ್ ಎಂಬ ಕಾಮ್ರೇಡ್‌ನ ಕಥೆಯಾಗಿ ಬದಲಾಗುತ್ತದೆ. ಕಥೆಯ ನಿರೂಪಣೆಯಲ್ಲಾಗುವ ಈ ಶಿಫ್ಟ್ ಕಥೆಯ ಹದವನ್ನು ತಪ್ಪಿಸಿದೆ.

ಸಮಾಜದಲ್ಲಿ ತಳವರ್ಗದವರನ್ನು ತುಳಿಯಲು, ಮೇಲುವರ್ಗದವರು ಮಾಡಿಕೊಂಡಿರುವ ಮೌಢ್ಯದ ಹತ್ಯಾರಗಳು ಮತ್ತು ಕುಟುಂಬ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗುವ ಹೆಣ್ಣು – ಈ ಎರಡು ವಸ್ತುಗಳು ಅಮರೇಶ ಅವರ ಕಥೆಗಳಲ್ಲಿ ಮತ್ತೆ ಮತ್ತೆ ಕಂಡುಬರುತ್ತವೆ. ಆದರೆ, ಇದು ಪುನರಾವರ್ತನೆ ಅಲ್ಲ. ತನ್ನನ್ನು ಕಾಡಿದ, ತಲ್ಲಣಕ್ಕೆ ಗುರಿಮಾಡಿದ ಸಂಗತಿಯನ್ನು ಮತ್ತೆ ಮತ್ತೆ ಧ್ಯಾನಿಸುತ್ತ, ಅದನ್ನು ಅರ್ಥ ಮಾಡಿಕೊಳ್ಳಲು ಯತ್ನಿಸುವ ಕಥೆಗಾರನ




**ಬೀಜದ ಮನುಷ್ಯ**
ಲೇ: ಅಮರೇಶ ಗಿಣಿವಾರ
ಪು: 88; ಬೆಲೆ: ರೂ. 120
ಪ್ರ: ನಿಸರ್ಗ ಪ್ರಕಾಶನ, ಗುಡದೂರು
ಫೋ: 9480349862

ಪ್ರಯತ್ನವಿದು. ಈ ಪ್ರಯತ್ನದ ಜೊತೆಗೆ ಕಥೆಯ ಆಕೃತಿಯ ಬಗೆಗಿನ ಶ್ರದ್ಧೆ, ಭಾಷೆಯ ಕುರಿತಾದ ಎಚ್ಚರ, ರೂಪಕದ ಹಂಬಲ ಎಲ್ಲವೂ ಇಲ್ಲಿನ ಕಥೆಗಳನ್ನು ಅಚ್ಚುಕಟ್ಟುಗೊಳಿಸಿವೆ. ಆದರೆ ಕೆಲವು ಕಡೆ ವಿವರಗಳನ್ನು ಮೀರಿ ಬದುಕಿನ ತಾತ್ವಿಕತೆಯನ್ನು, ದರ್ಶನವನ್ನು ಹಿಡಿಯುವ ಪ್ರಯತ್ನ ಕಾಣಿಸುವುದಿಲ್ಲ. ಅದು ಇಲ್ಲಿನ ಕೆಲವು ಕಥೆಗಳ ಮಿತಿ. ಅದನ್ನು ಮುಂದಿನ ಕಥೆಗಳಲ್ಲಿ ಮೀರಿಕೊಳ್ಳುವ ಎಲ್ಲ ಶಕ್ತಿ ಅಮರೇಶ ಅವರಿಗೆ ಇದೆ.

●